ಅ) ಹಾಗಿದ್ದಲ್ಲಿ, ಸಾರ್ವಜನಿಕರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಇದನ್ನು ಸರಿಪಡಿಸಲು ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ವೀರ ಕುಮಾರ್ ಪಾಟೀಲ್ (ಇಂಧನ ರಾಜ್ಯ ಸಚಿವರು) :

ಅ) ಬೆಂಗಳೂರು ಉತ್ತರ ತಾಲ್ಲೂಕು ಯಶವಂತಪುರ ಹೋಬಳಿ ಸಿಡದಹಳ್ಳಿ ಗ್ರಾಮದಲ್ಲಿ ಅನುಮೋದಿತ ಮಾರ್ಗದಲ್ಲಿಯೇ ಹೈ ಟೆನ್‌ಷನ್ ಕಂಬಗಳನ್ನು (ಟವರ್‌ಗಳನ್ನು) ಹಾಕಲಾಗಿದೆ. ಈ ಮಾರ್ಗವು ಬೆಂಗಳೂರು ಪೀಣ್ಯ ಸಮೀಪದಲ್ಲಿ ವೀಡಿಯಾ ಕಾರ್ಖಾನೆಯವರು ತಮ್ಮ ಕಾರ್ಖಾನೆಗೆ ಸ್ವಯಂ ತಾವೇ ನಿರ್ವಹಿಸುತ್ತಿರುವ ವಿದ್ಯುತ್ ಮಾರ್ಗವಾಗಿದ್ದು, ಕಾನೂನು ಬಾಹಿರವಾಗಿ ಯಾವುದೇ ಕಂಬಗಳನ್ನು ಟವರ್‌ಗಳನ್ನು ನೆಟ್ಟಿರುವುದಿಲ್ಲ.

ಆ) ಸಾರ್ವಜನಿಕರ ದೂರುಗಳನ್ನು ಬೆಂಗಳೂರು ನಗರ ಜಿಲ್ಲಾಧಿಕಾರಿಗಳು ಪರಿಶೀಲಿಸಿ ತೀರ್ಮಾನ ಕೊಟ್ಟಿರುತ್ತಾರೆ. ಈ ತೀರ್ಮಾನದಂತೆಯೇ ಸದರಿ ಕಾಮಗಾರಿಯು ನಡೆಯುತ್ತಿದೆ.

ಪೀಣ್ಯದ ಸಮೀಪದಲ್ಲಿ ಎಲೆಕ್ಟ್ರಿಕ್ ಟವರ್‌ಗೆ ತಂತಿ ಅಳವಡಿಸುವಲ್ಲಿ 2 ವ್ಯಕ್ತಿಗಳ ಮೃತ

743 - ಶ್ರೀ ಆರ್. ಅಶೋಕ್ (ಉತ್ತರಹಳ್ಳಿ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಪೀಣ್ಯದ ಸಮೀಪದಲ್ಲಿ ಹೈಟೆನ್‌ಷನ್ ವಿದ್ಯುತ್ ಮಾರ್ಗಕ್ಕಾಗಿ ಕಟ್ಟಲಾಗಿದ್ದ ಎಲೆಕ್ಟ್ರಿಕ್ ಟವರ್‌ಗೆ ತಂತಿ ಅಳವಡಿಸುವಲ್ಲಿ ನಿರ್ಲಕ್ಷ್ಯ ವಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ನಿರ್ಲಕ್ಷ್ಯದಿಂದಾಗಿ ಇಬ್ಬರು ಕಾರ್ಮಿಕರು ಮೃತರಾದದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಇದಕ್ಕೆ ಸಂಬಂಧಪಟ್ಟವರ ಮೇಲೆ ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ವೀರ ಕುಮಾರ್ ಪಾಟೀಲ್ (ಇಂಧನ ರಾಜ್ಯ ಸಚಿವರು) :

ಅ) ಬೆಂಗಳೂರು ಪೀಣ್ಯ ಸಮೀಪದಲ್ಲಿ ವೀಡಿಯಾ ಕಾರ್ಖಾನೆಯವರು ತಮ್ಮ ಕಾರ್ಖಾನೆಗೆ ಬೇಕಾಗುವ ವಿದ್ಯುತ್ ಮಾರ್ಗವನ್ನು ತಾವೇ ಸ್ವಯಂ ನಿರ್ವಹಿಸುತ್ತಿರುವಾಗ, ಎಲೆಕ್ಟ್ರಿಕ್ ಟವರ್‌ಗೆ ದಿನಾಂಕ 3.3.2000 ತಂತಿ ಅಳವಡಿಸುವ ಸಮಯದಲ್ಲಿ ಸಂಭವಿಸಿದ ಮೆಕಾನಿಕಲ್ ಅಪಘಾತ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ಗಮನಕ್ಕೆ ಬಂದಿರುತ್ತದೆ.

ಆ) ಈ ಅಪಘಾತದಲ್ಲಿ ಇಬ್ಬರು ಕಾರ್ಮಿಕರು ಮೃತರಾದದ್ದು, ಕರ್ನಾಟಕ ವಿದ್ಯುತ್ ಪ್ರಕರಣ ನಿಗಮದ ಗಮನಕ್ಕೆ ಬಂದಿದೆ.

ಇ) ಬೆಂಗಳೂರು ಪೀಣ್ಯ ಸಮೀಪದಲ್ಲಿ ವೀಡಿಯಾ ಕಾರ್ಖಾನೆಯವರು ತಮ್ಮ ಕಾರ್ಖಾನೆಗೆ ವಿದ್ಯುತ್ ಮಾರ್ಗವನ್ನು ತಾವೇ ಸ್ವಯಂ ನಿರ್ವಹಿಸುತ್ತಿರುವಾಗ ದಿ. 3.3.2000ರಂದು ಎಲೆಕ್ಟ್ರಿಕ್

ಟವರ್‌ಗೆ ತಂತಿ ಅಳವಡಿಸುವ ಸಮಯದಲ್ಲಿ ಸಂಭವಿಸಿದ ಮೆಕಾನಿಕಲ್ ಅಪಘಾತದ ಬಗ್ಗೆ ಸರ್ಕಾರದ ಮುಖ್ಯ ವಿದ್ಯುತ್ ಪರಿವೀಕ್ಷಕರವರು ತನಿಖೆ ನಡೆಸುತ್ತಿದ್ದು, ತನಿಖಾ ವರದಿ ಬಂದ ನಂತರ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ಮಂಡ್ಯ ಜಿಲ್ಲೆಯಲ್ಲಿ ಕಿರು ಜಲ ವಿದ್ಯುತ್ ಯೋಜನೆ

744 - ಶ್ರೀ ಆತ್ಮಾನಂದ ಎಂ.ಎಸ್. (ಮಂಡ್ಯ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಡ್ಯ ಜಿಲ್ಲೆಯಲ್ಲಿ ಕಿರು ಜಲ ವಿದ್ಯುತ್ ಯೋಜನೆಗಳನ್ನು ಕೈಗೊಳ್ಳಲು ಅವಕಾಶವಿರುವುದನ್ನು ಸರ್ಕಾರ ಗಮನಿಸಿದೆಯೇ?

ಆ) ಹಾಗಿದ್ದಲ್ಲಿ ಈವರೆವಿಗೆ ಸಾಧಿಸಿರುವ ಪ್ರಗತಿಯ ವಿವರಗಳೇನು?

ಶ್ರೀ ವೀರ ಕುಮಾರ ಪಾಟೀಲ್ (ಇಂಧನ ರಾಜ್ಯ ಸಚಿವರು) :

ಅ) ಹೌದು.

ಆ) ಮಂಡ್ಯ ಜಿಲ್ಲೆಯಲ್ಲಿ 19.55 ಮೆ. ವ್ಯಾ. ಸಾರ್ಮಥ್ಯದ 11 ಕಿರು ಜಲ ವಿದ್ಯುತ್ ಯೋಜನೆಗಳನ್ನು ಗುರುತಿಸಿದ್ದು, ಖಾಸಗಿ ಬಂಡವಾಳದಾರನಿಗೆ ಹಂಚಿಕೆ ಮಾಡಲಾಗಿದೆ. ಹಂಚಿಕೆಯಾದ ಕಿರು ಜಲ ವಿದ್ಯುತ್ ಯೋಜನೆಗಳಲ್ಲಿ 5.35 ಮೆ.ವ್ಯಾ. ಸಾಮರ್ಥ್ಯದ 3 ಯೋಜನೆಗಳನ್ನು ಸ್ಥಾಪಿಸಿದ್ದು, ವಿದ್ಯುತ್ ಉತ್ಪತ್ತಿ ಮಾಡಲಾರಂಭಿಸಿರುತ್ತದೆ. (ಯೋಜನಾವಾರು ವಿವರಗಳನ್ನು ಅಡಕ -1ರಲ್ಲಿ ನೀಡಲಾಗಿದೆ).

ಅಡಕ - 1

ಮಂಡ್ಯ ಜಿಲ್ಲೆಯಲ್ಲಿ ಕಿರು ಜಲ ವಿದ್ಯುತ್ ಯೋಜನೆಗಳ ವಿವರ

1. ಕಾವೇರಿ ಹೈಡ್ರೋ ಎನರ್ಜಿ, ಬೆಂಗಳೂರು.	3. ಮೆ.ವ್ಯಾ.	ಸೆಪ್ಟೆಂಬರ್ 98 ರಿಂದ ಪ್ರಾರಂಭವಾಗಿದೆ.
2. ಯುಕೇನ್ ಇಂಡಿಯಾ ಲಿಮಿಟೆಡ್, ಬೆಂಗಳೂರು,	0.35 ಮೆ.ವ್ಯಾ. (ಅತ್ತಿಹಳ್ಳ)	ಜುಲೈ 1998
3. ಕಿಲಾರ ಪವರ್ ಪ್ರೈವೇಟ್ ಲಿಮಿಟೆಡ್ ಬೆಂಗಳೂರು.	2. ಮೆ.ವ್ಯಾ (ಕಿಲಾರ)	ಡಿಸೆಂಬರ್ 1999
4. ವಿಜಯಲಕ್ಷ್ಮಿ, ಹೈಡ್ರೋ ಪವರ್ ಪ್ರೈವೇಟ್ ಲಿ., ಬೆಂಗಳೂರು	3. ಮೆ.ವ್ಯಾ. (ಹೆಬ್ಬಕವಾಡಿ)	ಈ ಯೋಜನೆಯು ಪ್ರಾರಂಭಿಕ ಹಂತದಲ್ಲಿದೆ.
5. ವಿ. ಪ್ರಾಮ್ ಪವರ್ ಕಂಪನಿ, ಮೈಸೂರು.	0.50 ಮೆ.ವ್ಯಾ (ದೇವರಾಯ ಅಣೆಕಟ್ಟು)	ಈ ಯೋಜನೆಯು ಪ್ರಾರಂಭಿಕ ಹಂತದಲ್ಲಿದೆ.